Govt. of Karnataka [C.R.P. 67

Deposition Sheets (R.P. No.

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆಃ 180/2020**

**ದಿನಾಂಕಃ16-03-2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯೂಃ | 5 | ಪಿಡಬ್ಲ್ಯೂ | 4 |
|---|---|---|---|
| ಹೆಸರು | ಶ್ರೀನಿವಾಸ್ ಟಿ ಎನ್ | | |
| ತಂದೆ / ಗಂಡನ ಹೆಸರು | ನರಸಯ್ಯ | | |
| ವಯಸ್ಸು | 32 | | |
| ಉದ್ಯೋಗ | ಕೂಲಿ ಕೆಲಸ | | |
| ವಾಸ | ತರೂರು ಗ್ರಾಮ | | |

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಿಪಿ-2 ರಲ್ಲಿರುವ ಸಹಿ ನನ್ನದೆ. ಸಾಕ್ಷಿಯ ಸಹಿಯನ್ನು **ನಿಪಿ-2(ಡಿ)** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 2019 ರಲ್ಲಿ ದೊಡ್ಡಕೆರೆ ಬಳಿ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ರಸ್ತೆಯ ಬಳಿ ಅಪಘಾತವಾಗಿದ್ದು , ನಾನು ಊರಿಗೆ ಹೋಗುತ್ತಿದ್ದವನನ್ನು ಪೋಲಿಸರು ಸಹಿ ಮಾಡಲು ಹೇಳಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈಗ ನೋಡುತ್ತಿರುವ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಯನ್ನು **ನಿಪಿ-5** ಎಂದು , ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಡಿಸೆಂಬರ್ ತಿಂಗಳಲ್ಲಿ ಬಸ್ ಸ್ಟಾಂಡ್ ಬಳಿ ವಾಹನ ಮಹಜರ್ ಮಾಡಲು ಕರೆದಾಗ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ಗಿರೀಶ್ ಎಂಬುವರು ಸಹಿ ಮಾಡಿರುತ್ತಾರೆ. ಸದರಿ ವಾಹನ ನಂ. ಕೆಎ-09-ಎಫ್-5179 ಕೆ ಎಸ್ ಆರ್ ಟಿ ಸಿ ಬಸ್ ಆಗಿರುತ್ತದೆ. ನಾನು ಊರಿಗೆ ಹೋಗುತ್ತಿದ್ದವವನನ್ನು ಪೋಲಿಸರು ಸಾಕ್ಷಿಯಾಗಿ ಸಹಿ ಮಾಡಿ ಎಂದು ಕೇಳಿದ ಕಾರಣ ಮಾಡಿರುತ್ತೇನೆ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು **ಭಾಗಶಃ ಪ್ರತಿಕೂಲ** ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎ ಪಿ ಪಿ ರವರಿಂದಃ**

ದಿಃ 21-09-2019 ರಂದು ಶಿರಾ ದೊಡ್ಡಕೆರೆ ಬಳಿ ಕೆ ಎಸ್ ಆರ್ ಟಿ ಸಿ ಬಸ್ ನಿಂದ ಅಪಘಾತವಾಗಿರುತ್ತದೆ ಎನ್ನುವ ವಿಚಾರವಾಗಿ ಪೋಲಸರು ಸ್ಥಳ ಮಹಜರ್ ಗೆ ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 3 ರವರು ನನ್ನನ್ನು ಹಾಗೂ ಪೋಲಿಸರಿಗೆ ಅಪಘಾತದ ಸ್ಥಳವನ್ನು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿ ಮದ್ಯಾಹ್ನ 2.00 ರಿಂದ 2.45 ರವರೆಗೆ ಮಹಜರ್ ಮಾಡಿ, ಸ್ಥಳದಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ದಿಃ 02-12-2019 ರಂದು ಶಿರಾದ ಕೆ ಎಸ್ ಆರ್ ಟಿ ಸಿ ಬಸ್ ಸ್ಟ್ಯಾಂಡ್ ಒಳಗೆ ನಿಂತಿದ್ದ ಕೆಎ-09-ಎಫ್-5179 ನಂ. ನ ವಾಹನವನ್ನು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿಯೇ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಮಹಜರ್ ನ್ನು ಬೆಳಗ್ಗೆ 10.00 ರಿಂದ 10.45 ರವರೆಗೆ ಸಿದ್ದಪಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ**

ನಿಪಿ-2 ಮತ್ತು 5 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.